ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿ:16-01-2023

ಪಾಟೀ ಸವಾಲು ಶ್ರೀ ಎಸ್ ಜಿ ವಕೀಲರಿಂದ

ನಾನು ಆಟೋ ಚಾಲಕನಾಗಿ ಕೆಲಸ ಮಾಡುತ್ತೇನೆ. 1 ನೇ ಪ್ರತಿವಾದಿ ಪರಿಚಯ 1987 ರಿಂದಲೂ ಇದೆ. 1 ನೇ ಪ್ರತಿವಾದಿ ಮಾಜಿ ಎಂ ಎಲ್ ಎ ವಿಶ್ವನಾಥ್ ರವರ ಭಾವ ಎಂದರೆ ಸರಿ. ಈ ದಾವಾ ಯಾರು ದಾಖಲು ಮಾಡಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ದಾವಾ ದಾಖಲು ಮಾಡಿರುತ್ತೇನೆ. 1 ನೇ ಪ್ರತಿವಾದಿಗೆ ಸೇರಿದ ಜಾಗವನ್ನು ಪಕ್ಕದವರು ಅವರಿಗೆ ಸೇರಿದ್ದೆಂದು ದಾವಾ ದಾಖಲು ಮಾಡಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದ್ದು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಅಸ್ತಿಯ ಚಕ್ಕುಬಂದಿ ದಃ ಬಿ ಎಂ ರಸ್ತೆ ಉಃ ಗದ್ದೆ ಪೂಃ ಮಂಗಳ್ ಜೈನ್ ರವರ ಜಾಗ ಪಃ ವಾದಿಯ ಜಾಗ ಇದೆ. ವಾದಿ ಎಷ್ಟು ಜಾಗ ವಿಸ್ತೀರ್ಣಕ್ಕೆ ದಾವಾ ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರದೀಪ್ ಬಿನ್ ಶ್ರೀನಿವಾಸ್ ರವರು ಈ ದಾವಾ ದಾಖಲು ಮಾಡಿರುತ್ತಾರೆ. ಶ್ರೀನಿವಾಸ ಬಿನ್ ನಂಜುಂಡಶೆಟ್ಟಿ ದಾವಾ ದಾಖಲು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಕಲ್ಯಾಣ ಮಂಟಪ ಮತ್ತು ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ನುಡಿಯುತ್ತಾರೆ. ದಾವಾ ಅಸ್ತಿ ಮೊದಲಿಗೆ ಸ ನಂ 286 ಅಗಿತ್ತು ಈಗ ಪುರಸಭೆ ಆಗಿ ಖಾತಾ ನಂಬರ್ ನಲ್ಲಿ ಇರುವುದು ನನಗೆ ಗೊತ್ತಿಲ್ಲ. ಸ ನಂ 286 ರಲ್ಲಿ 02 ಎಕರೆ 17 ಗುಂಟೆ ವಿಸ್ತೀರ್ಣ ಪ್ರದೇಶ ಎಂಬುದು ನನಗೆ ಗೊತ್ತಿಲ್ಲ. 2010-11 ರಲ್ಲಿ ಸ ನಂ 286 ಅನ್ನು ಪರಿವರ್ತನೆ ಮಾಡಿ ನಿವೇಶನ ಮತ್ತು ವಾಣಿಜ್ಯ ಮಳಿಗೆ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಅಸ್ತಿಯಲ್ಲಿ 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂಬುದು ನನಗೆ ಗೊತ್ತಿಲ್ಲ. 2015 ರಲ್ಲಿ ವಾದಿ ದಾವಾ ಅಸ್ತಿಯಲ್ಲಿ ಕಲ್ಯಾಣ ಮಂಟಪ ಮತ್ತು

ವಾಣಿಜ್ಯ ಮಳಿಗೆ ಮಾಡಲು ಶುರು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಖರೀದಿ ಮಾಡಿದ ಜಾಗದ ಮೂಲ ಸರ್ವೆ ನಂಬರ್ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಖರೀದಿ ಮಾಡಿದ ಸ್ವತ್ತನ್ನು ನಿವೇಶನವಾಗಿ ಯಾವಾಗ ಪರಿವರ್ತನೆ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಶಂಕರಶೆಟ್ಟಿ ಯವರಿಂದ ಎಷ್ಟು ವಿಸ್ತೀರ್ಣ ಜಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಂಗಳ್ ಜೈನ್ ರವರು ಎಷ್ಟು ವಿಸ್ತೀರ್ಣ ಜಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸ ನಂ 300 ಮತ್ತು 301 ರಲ್ಲಿ ಇರುವ ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ. ಸ ನಂ 300 ಮತ್ತು 301 ರ ಮೂಲ ಮಾಲೀಕರಾದ ರಂಗಪ್ಪನವರು ತಮ್ಮ ಜಮೀನಿನಲ್ಲಿ ನಿವೇಶನ ನಿರ್ಮಾಣ ಮಾಡಿದ್ದು ಅದು ಸದರಿ ಜಮೀನಿನ ವಿಸ್ತೀರ್ಣಗಿಂತ ಹೆಚ್ಚಿನ ನಿವೇಶನಗಳನ್ನು ನಕಾಶೆಯಲ್ಲಿ ತೋರಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಮೂಲ ಮಾಲೀಕರಿಗೆ 6171.40 ಸ್ಕ್ವಯರ್ ಮೀಟರ್ ವಿಸ್ತೀರ್ಣ ಜಾಗದ ನಿವೇಶನಗಳು ಇದ್ದು ಆದರೆ ಅವರು ನಕಾಶೆಯಲ್ಲಿ 6520.50 ಸ್ಕ್ವೆಯರ್ ಮೀಟರ್ ವಿಸ್ತೀರ್ಣ ಜಾಗ ತೋರಿಸಿರುವುದು ನನಗೆ ಗೊತ್ತಿಲ್ಲ. ಮೊದಲಿಗೆ ಮೂಲ ಮಾಲೀಕರು 17 ನಿವೇಶನಗಳನ್ನು ತೋರಿಸಿ ಪುರಸಭೆಗೆ ನಕಾಶೆ ಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಈಗ ಪುರಸಭೆಯಲ್ಲಿ ಸದರಿ ಜಾಗಕ್ಕೆ ಸಂಬಂಧಿಸಿದಂತೆ 33 ನಿವೇಶನಗಳಿಗೆ ಖಾತಾ ವಿಸ್ತೀರ್ಣ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ, ಪುರಸಭೆಯವರು 33 ನಿವೇಶನಗಳಿಗೆ ಸಂಬಂಧಿಸಿದಂತೆ 452.95 ಸ್ಕ್ವಯರ್ ಮೀಟರ್ ಜಾಗಕ್ಕೆ ಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಪುರಸಭೆಯವರು ಹೆಚ್ಚಿನ ವಿಸ್ತೀರ್ಣ ತೋರಿಸಿದ್ದರಿಂದ ವಾದಿಗೆ ಸೇರಿದ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಸೇರಿದ ಜಾಗ ಎಂದು ತೊಂದರೆ ಕೊಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ.

ನಿಡಿ-8 ಮತ್ತು 9 ಯಾವ ಕಟ್ಟಡಕ್ಕೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನನಗೆ 1 ನೇ ಪ್ರತಿವಾದಿ ಮತ್ತು ಎಂ ಎಲ್ ಎ ರವರ ಪರಿಚಯ ಇರುವುದರಿಂದ ನಾನು ನ್ಯಾಯಾಲಯಕ್ಕೆ ಬಂದು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

ಸಿವಿಲ್ ನ್ಯಾಯಾಧೀಶರು, ಸಕಲೇಶಪುರ